೨) ದಲಿತರ ಮೇಲೆ ನಡೆದಿರುವ ದೌರ್ಜನ್ಯಕ್ಕೆ ಪೋಲೀಸರ ಕುಮ್ಮಕ್ಕು.

ಅಧ್ಯಕ್ಷರು.—ಮಾನ್ಯ ಸದಸ್ಯರು ದಯವಿಟ್ಟು ರೂಲ್ಸ್ ಅಂಡ್ ರೆಗ್ಯುಲೇಷನ್ ಚೆನ್ನಾಗಿ ಓದಬೇಕು. ಇನ್ನೂ ಎರಡು ವರ್ಷ ಇದೆ ನಾನು ಏತಕ್ಕೆ ತಮ್ಮ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಹೋಗಲಿ ದಯವಿಟ್ಟು ಕುಳಿತುಕೊಳ್ಳಬೇಕು. ತಾವು ಏನಾದರೂ ಹೇಳುವುದು ಇದ್ದರೆ, ತಾವು ನನ್ನ ಛೇಂಬರ್‌ಗೆ ಬಂದು ಹೇಳಿ, ದಯವಿಟ್ಟು ಈಗ ಕುಳಿತುಕೊಳ್ಳಬೇಕು. ಈಗ ಎರಡನೆಯದಾಗಿ ಮಾನ್ಯ ಸದಸ್ಯರುಗಳಾದ ಮಲ್ಲಿಕಾರ್ಜುನ ಖರ್ಗೆ, ಬಸವಲಿಂಗಪ್ಪ, ವೀರಪ್ಪಮೊಯಿಲಿ, ಕೆ. ಎಚ್. ಪಾಟೀಲ್, ಮಲ್ಲಾರಿಗೌಡ, ಎಸ್. ಪಾಟೀಲ್, ಕೆ. ಎಚ್ ಶ್ರೀನಿವಾಸ ಮತ್ತು ಗೋಪಾಲ ಮುಕುಂದ ಕಾನಡೆ, ಇವರಿಷ್ಟು ಮಂದಿ ಇನ್ನೊಂದು ಅಡ್ಜರ್ನ್‌ಮೆಂಟ್ ಮೋಷನ್ ಕೊಟ್ಟಿದ್ದಾರೆ. ಅದು ಈ ರೀತಿ ಇದೆ.

"ಕರ್ನಾಟಕ ರಾಜ್ಯದಲ್ಲಿ ಇತ್ತೀಚೆಗೆ ದಲಿತರ ಮೇಲೆ ನಡೆದಿರುವ ದೌರ್ಜನ್ಯದ ಮತ್ತು ಅದಕ್ಕೆ ಪೋಲೀಸ್ ಇಲಾಖೆಯ ಕುಮ್ಮಕ್ಕು ಇರುವ ವಿಚಾರ"ದ

ಬಗ್ಗೆ ನಿಲುವಳಿ ಸೂಚನೆ ಕೊಟ್ಟಿದ್ದಾರೆ. ಒಂದು ದಿವಸದಲ್ಲಿ ಎರಡು ನಿಲುವಳಿ ಸೂಚನೆ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ ಆದ್ದರಿಂದ, ಈ ವಿಚಾರದ ಬಗ್ಗೆ ನಾನು ಚರ್ಚೆ ಮಾಡಲಿಕ್ಕೆ ನಿಯಮ ೬೮ರ ಪ್ರಕಾರ ಅವಕಾಶ ಮಾಡಿಕೊಡುತ್ತೇನೆ, ದಯವಿಟ್ಟು ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೆ, ತಾವು ಸ್ವಲ್ಪ ಸಮಾಧಾನವಾಗಿ ಕೇಳಬೇಕು. ಇದು ಬಹಳ ಮಹತ್ವವಾದಂಥ ವಿಷಯ.

ಅಧ್ಯಕ್ಷರು.—ನಾನು ಸಮಾಧಾನವಾಗಿಯೇ ಕೇಳುತ್ತೇನೆ. ಒಂದು ದಿವಸದಲ್ಲಿ ಎರಡು ಅಡ್ಜರ್ನ್‌ಮೆಂಟ್ ಮೋಷನ್‌ಗಳನ್ನು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಈಗ ಯಾವುದನ್ನೂ ತೆಗೆದುಕೊಂಡಿಲ್ಲ.

ಅಧ್ಯಕ್ಷರು.—ನಾಳೆ ದಿವಸ ನಿಯಮ ೬೮ರ ಪ್ರಕಾರ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ, ಈಗ ಗೃಹ ಮಂತ್ರಿಗಳು ಇಲ್ಲ, ನಾಳೆ ಅವಕಾಶ ಕೊಡುತ್ತೇನೆ ದಯವಿಟ್ಟು ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

ಶ್ರೀ ಎಸ್ ಬಂಗಾರಪ್ಪ.—ಅಧ್ಯಕ್ಷರೆ, ನಿಲುವಳಿ ಸೂಚನೆ ಒಂದು ದಿವಸದಲ್ಲಿ ಎರಡು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ ಎಂದು ರೂಲ್ಸ್‌ನಲ್ಲಿರುವುದು ತಮಗೂ ಗೊತ್ತಿದೆ, ನನಗೂ ಗೊತ್ತಿದೆ. ಒಂದು ನಿಲುವಳಿ ಸೂಚನೆಯನ್ನು ತೆಗೆದುಕೊಂಡ ಮೇಲೆ ಮತ್ತೊಂದು ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಲಿಕ್ಕೆ ಬರುವುದಿಲ್ಲ. ನಿಲುವಳಿ ಸೂಚನೆಯನ್ನು ಡಿಸ್‌ಕಷನ್‌ಗೆ ತೆಗೆದುಕೊಳ್ಳಬೇಕೆಂದು ರೂಲ್ಸ್‌ನಲ್ಲಿರುವುದು, ಆದರೆ ಈಗ ಡಿಸ್‌ಕಷನ್‌ಗೆ ತೆಗೆದುಕೊಂಡಿಲ್ಲದೇ ಇರುವುದರಿಂದ, ಇದೇ ಮೊದಲನೆಯದಾಗುತ್ತದೆ. ಆದ್ದರಿಂದ, ಮಾನ್ಯ ವಿರೋಧಪಕ್ಷದ ಉಪನಾಯಕರು ಯಾವ ವಿಚಾರಗಳನ್ನು ಹೇಳುತ್ತಾರೆ ಎಂಬುದನ್ನು ದಯವಿಟ್ಟು ಕೇಳಬೇಕು.

ಅಧ್ಯಕ್ಷರು.—ಎರಡು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಈಗಾಗಲೇ ಒಂದನ್ನು ತೆಗೆದುಕೊಂಡು ರಿಜೆಕ್ಟ್ ಮಾಡಿದ್ದೇನೆ. ನಾಳೆ ದಿವಸ ಇನ್ನೊಂದನ್ನು ನಿಯಮ ೬೮ರ ಪ್ರಕಾರ ಅವಕಾಶ ಮಾಡಿಕೊಡುತ್ತೇನೆಂದು ರೂಲಿಂಗ್ ಕೊಟ್ಟಿದ್ದೇನೆ. ದಯವಿಟ್ಟು ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

ಶ್ರೀ ಎಸ್. ಬಂಗಾರಪ್ಪ.—ನಿಯಮ ೬೮ರ ಪ್ರಕಾರ ಇದಕ್ಕೆ ಪ್ರಿಯಾರಿಟಿ ಕೊಡಬೇಕಾಗುತ್ತದೆ. ತಾವು ತಮ್ಮ ಛೇಂಬರ್‌ನಲ್ಲಿ ತೆಗೆದುಕೊಂಡಿರತಕ್ಕ ತೀರ್ಮಾನವನ್ನು ಈ ಸದನಕ್ಕೆ ತಿಳಿಸಿದ್ದೀರಿ...

(ಗೊಂದಲ)

ಅಧ್ಯಕ್ಷರು.—ಮಾನ್ಯ ಹಿರಿಯ ಸದಸ್ಯರಾದ ವೀರಪ್ಪ ಮೊಯಿಲಿಯವರು ಸ್ವಲ್ಪ ರೂಲ್ಸ್ ಓದಬೇಕು. ಈಗ ತಾವು ಜನರಲ್ ಆಗಿ ಕೊಟ್ಟಿದ್ದೀರಿ. ನಾಳೆ ದಿವಸ ಇದಕ್ಕೆ ನಿಯಮ ೬೮ರ ಪ್ರಕಾರ ಚರ್ಚೆ ಮಾಡಲಿಕ್ಕೆ ಅವಕಾಶ ಕೊಡುತ್ತೇನೆಂದು ಹೇಳಿದ್ದೇನೆ. ಈಗ ಗೃಹ ಮಂತ್ರಿಗಳು ಇಲ್ಲ, ನಾಳೆ ನಿಯಮ ೬೮ರ ಪ್ರಕಾರ ಅವಕಾಶ ಕೊಡುತ್ತೇನೆಂದು ಹೇಳಿದ್ದೇನೆ. ಅದರ ಮೇಲೆ ತಾವು ಚರ್ಚೆ ಮಾಡಬಹುದು. ದಯವಿಟ್ಟು ಈಗ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

೧೨-೩೦ ಪಿ. ಎಂ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇದಕ್ಕೆ ಸೀಮಿತವಾಗಿ ಹೇಳುತ್ತಿದ್ದೇನೆ. ಒಂದು ಅಡ್ಜರ್ನ್ ಮೆಂಟ್ ಮೋಷನ್‌ನ್ನು ತೆಗೆದುಕೊಂಡ ಮೇಲೆ ಇನ್ನೊಂದು ಅಡ್ಜರ್ನ್‌ಮೆಂಟ್ ಮೋಷನ್‌ನ್ನು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ ಎಂದು ತಾವು ಹೇಳಿದ್ದೀರಿ. ಇದನ್ನು ಒಪ್ಪಿಕೊಳ್ಳುತ್ತೇನೆ. ಇದು ಪ್ರಿಸಿಡೆಂಟ್ ಆಗಬಾರದು, ಯಾವುದೇ ವಿಚಾರವಾಗಿರಲಿ ಸ್ಪಷ್ಟವಾಗಿರಬೇಕು. ತಾವು ಅಪ್ಪಣೆ ಕೊಟ್ಟಂಥ ಆದೇಶದ ತಾತ್ಪರ್ಯ ಏನಿದೆ ಅದು ಈ ಮನೆಯ ಸದಸ್ಯರಿಗೆ ಅರ್ಥವಾಗಬೇಕು. ತಮ್ಮ ನಿಯಮದ ಸ್ಪಷ್ಟೀಕರಣಕ್ಕೆ ನಾನು ಸೀಮಿತವಾಗಿ ಹೇಳುತ್ತಿದ್ದೇನೆ ರೂಲ್ ೬೧ ಇದೆ. ಈ ನಿಯಮದಲ್ಲಿ ರಿಸ್ಟ್ರಿಕ್ಷನ್ ಹಾಕಿದ್ದಾರೆ, ' The right to move...'

MR SPEAKER.— 'Not more than one such motion shall be made...' 'shall be made ' ಎಂದು ಇದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಿಯಮದ ಪುನರುಚ್ಚಾರಕ್ಕೆ ನಾನು ಹೇಳುತ್ತಿಲ್ಲ. ತಾವು ೨ ಅಡ್ಜರ್ನ್‌ಮೆಂಟ್ ಮೋಷನ್‌ನಗಳನ್ನು ಒಂದೇ ದಿನ ಮೂವ್ ಮಾಡುವುದಕ್ಕಾಗುವುದಿಲ್ಲವೆಂದು ಅಪ್ಪಣೆ ಕೊಡಿಸಿದ್ದೀರಿ. ಅಂದರೆ ಮಾನ್ಯ ವೆಂಕಟರಾಮಯ್ಯನವರದ್ದು ಒಂದು ಅಡ್ಜರ್ನ್‌ಮೆಂಟ್ ಮೋಷನ್, ನಮ್ಮದು ಒಂದು ಅಡ್ಜರ್ನ್‌ಮೆಂಟ್ ಮೋಷನ್ ಎಂದು ಅರ್ಥ ಕಲ್ಪಿಸಿದ್ದೀರಿ. ಈಗ ತಾವು ಏನು ರಿಜೆಕ್ಷನ್ ಮಾಡಿದ್ದೀರಿ, ಇದು ತಮ್ಮ ಛೇಂಬರ್‌ನಲ್ಲಿ ನಿರ್ಣಯ ಮಾಡಿದಂಥಾದ್ದು. ಅಲ್ಲಿ ತಾವು ಏನು ರಿಜೆಕ್ಷನ್ ಮಾಡಿದಿರಿ ಅದನ್ನು ಮಾನ್ಯ ಸದಸ್ಯರಿಗೆ ಇಂಟಿಮೇಟ್ ಮಾಡತಕ್ಕ ಕೆಲಸವನ್ನು ತಾವು ಈ ಸದನದಲ್ಲಿ ಮಾಡಿದ್ದೀರಿ. ಅಷ್ಟೇ ಹೊರತು ಬೇರೆ ಏನೂ ಇಲ್ಲ ಆದರೆ ನಮ್ಮ ಅಡ್ಜರ್ನ್‌ಮೆಂಟ್ ಮೋಷನ್‌ನ್ನು ಈಗ ತೆಗೆದುಕೊಳ್ಳಿ ಎಂದು ಹೇಳುವುದಕ್ಕೆ ನಮಗೆ ಹಕ್ಕಿದೆ. ನಮ್ಮ ಅಡ್ಜರ್ನ್‌ಮೆಂಟ್ ಮೋಷನ್‌ನ್ನು ತಾವು ಇಲ್ಲಿ ನಿರಾಕರಿಸುವುದಕ್ಕೆ ಬರುವುದಿಲ್ಲ. ಮಾನ್ಯ ಸದಸ್ಯರಾದ ವೆಂಕಟರಾಮಯ್ಯನವರು ತಮ್ಮ ಅಡ್ಜರ್ನ್‌ಮೆಂಟ್ ಮೋಷನ್‌ನ್ನು ಮೂವ್ ಮಾಡುವುದಕ್ಕೆ ಅವಕಾಶವನ್ನು ತಾವು ಕೊಡಲಿಲ್ಲ. ತಮ್ಮ ಛೇಂಬರ್‌ನಲ್ಲಿ ಏನು ನಿರ್ಣಯವನ್ನು ಮಾಡಿದ್ದೀರಿ ಅದನ್ನು ಇಲ್ಲಿ ಮಾನ್ಯ ಸದಸ್ಯರಿಗೆ ತಿಳಿಸುವ ಪ್ರಯತ್ನವನ್ನು ಮಾಡಿದ್ದೀರಿ. ಮಾನ್ಯ ವೆಂಕಟರಾಮಯ್ಯನವರು ನಿಲುವಳಿ ಸೂಚನೆಯನ್ನು ಮೂವ್ ಮಾಡುವುದಕ್ಕೆ ಅವಕಾಶವನ್ನು ಕೊಟ್ಟು ಪ್ರಿಲಿಮಿನರಿಯಾಗಿ ಅವರು ಮಾತನಾಡಿದ ಮೇಲೆ, ಮತ್ತು ಅದು ಇಲ್ಲಿ ಚರ್ಚೆಯಾದ ಮೇಲೆ ತಾವು ರಿಜಿಕ್ಟ್ ಮಾಡಬೇಕಾಗಿತ್ತು. ನಿಯಮದ ವ್ಯಾಪ್ತಿಯನ್ನು ತಾವು ಸಂಪೂರ್ಣವಾಗಿ ತಿಳಿದುಕೊಳ್ಳದಿದ್ದರೆ ನಾವು ಏನು ಮಾಡಬೇಕು ? ಅದು ಕಷ್ಟವಾಗುತ್ತದೆ. ತಾವು ತಮ್ಮ ಛೇಂಬರ್‌ನಲ್ಲಿ ಮಾಡಬೇಕಾದ ಕೆಲಸವನ್ನೆಲ್ಲಾ ಇಲ್ಲಿ ಮಾಡಬೇಕಾಗುತ್ತದೆ, ಅದೇ ರೀತಿ ತಾವು ತಮ್ಮ ಛೇಬರ್‌ನಲ್ಲಿ ಮಾಡಬೇಕಾದ ಕೆಲಸವನ್ನು ಇಲ್ಲಿ ಮಾಡಿದ್ದೀರಿ. ಇಲ್ಲಿ ನಿಯಮ ೬೧ರಲ್ಲಿ ಏನಿದೆ It is not at all effected and the Adjournment Motion which has been made by Hon. Members Sri Kharge and myself is as fresh as the first and it is a fresh one. ಆದ್ದರಿಂದ ಇದಕ್ಕೆ ರಿಸ್ಟ್ರಿಕ್ಷನ್ ಬರುವುದಿಲ್ಲ. Of course, It may be a techincal flaw on the part of your office,

ತಾವು ಇದನ್ನು ರಿಜಿಕ್ಟ್ ಮಾಡಿದಮೇಲೆ ಕಳುಹಿಸಿದ್ದರೆ ನಾವು ಆಕ್ಷೇಪ ಮಾಡುತ್ತಿರಲಿಲ್ಲ. ಮಾನ್ಯ ವೆಂಕಟರಾಮಯ್ಯನವರು ಪ್ರಿಲಿಮಿನರಿಯಾಗಿ ಮಾತನಾಡಲಿಲ್ಲ. ಆದ್ದರಿಂದ ತಾವು ಈ ರೂಲ್ಸನ್ನು ಇಲ್ಲಿ ಹೇಳುವುದಕ್ಕೆ ಬರುವುದಿಲ್ಲ. ours is as fresh motion and we have decided to move.

ಅಧ್ಯಕ್ಷರು.—ಅವರು ಎದ್ದು ನಿಂತು ಹೇಳಿದಾಗ ನಾನು ರೂಲಿಂಗ್ ಕೇಳಿದ್ದೇನೆ.

SRI M. VEERAPPA MOILY.—That ruling is not strictly under Rule 61.

ಅಧ್ಯಕ್ಷರು.—ರೂಲ್ ೬೧ನ್ನು ನಾನು ಏತಕ್ಕೆ ಹೇಳಿದೆ ಎಂದರೆ...

SRI M. VEERAPPA MOILY.—This may be at the most like a memorandum or a memo which is sent to the Member. It is not a substantive decision by the Speaker.

ಅಧ್ಯಕ್ಷರೂ.—ನಾನು ಅದನ್ನು ಒಂದೇ ಸಾರಿಗೆ ರಿಜಿಕ್ಟ್ ಮಾಡಿಲ್ಲ. ರೂಲ್ ೬೮ರ ಪ್ರಕಾರ ಡಿಸ್ಕಷನ್‌ಗೆ ಅವಕಾಶವನ್ನು ಕೊಡುತ್ತೇನೆಂದು ಹೇಳಿದ್ದೇನೆ. ತಮ್ಮದನ್ನು ನಾನು ಕನ್ವರ್ಟ್ ಮಾಡಿದ್ದೇನೆಂದು ಹೇಳಿದ್ದೇನೆ.

ಶ್ರೀ ಎಂ. ವೀರಪ್ಪಮೊಯಿಲಿ...ಅದು ನಿಲುವಳಿ ಸೂಚನೆಯಂ ಪ್ರಕಾರ ಬರುತ್ತದೆಯೇ ? ಇಲ್ಲವೋ ರೂಲ್ ೬೮ರ ಪ್ರಕಾರ that is matter which has to be looked into But to reject and not to allow us to raise the matter may not be proper.

ಅಧ್ಯಕ್ಷರು. – ರೂಲ್ ೬೮ರ ಪ್ರಕಾರ ಮಾತನಾಡಿ...

ಶ್ರೀ ಎಂ. ವೀರಪ್ಪಮೊಯಿಲಿ.—ತಾವು ಮಾನ್ಯ ವೆಂಕಟರಾಮಯ್ಯನವರಿಗೆ ಕೊಟ್ಟಂಥ ರೂಲಿಂಗ್‌ನ್ನು ನಮಗೆ ಕೊಡಬೇಡಿ. ನನ್ನ ಪ್ರಶ್ನೆ ಏನೆಂದರೆ we are eniitled to raise it under the rules. ಅಡ್ಜರ್ನ್‌ಮೆಂಟ್ ಮೋಷನ್‌ಗೆ ಆತಂಕ ಬರುತ್ತದೆ ಎನ್ನುವುದಾದರೆ ಬೇರೆ ರೀತಿ ಹೇಳಿ. ಅದಕ್ಕೆ ಸಮಜಾಯಿಶಿಗೆ ಅವಕಾಶ ಕೊಡಿ. It fully comes within the ambit of the adjournment motion. You could have said 'It is not a fit motion to be raised in the House.' You could have rejected. ಮಾನ್ಯ ವೆಂಕಟರಾಮಯ್ಯನವರಿಗೆ ಹೇಳಿದ ಹಾಗೆ ಮಾಡಬಹುದಾಗಿತ್ತು. ಅದನ್ನೂ ಕೂಡ ತಾವು ಮಾಡಲಿಕ್ಕೆ ಹೋಗಲಿಲ್ಲ.

ಅಧ್ಯಕ್ಷರು.—ನಿಯಮ ೬೮ರ ಮೇಲೆ ಈ ವಿಷಯವನ್ನು ಪ್ರಸ್ತಾಪ ಮಾಡಲು ನಿಮಗೆ ಈಗಾಗಲೇ ಹೇಳಿದ್ದೇನೆ. ಮಾನ್ಯ ಗೃಹಮಂತ್ರಿಗಳಿಗೆ ಬೆಳಿಗ್ಗೆ ಫೋನ್ ಮಾಡಿದ್ದೆ. ಅವರೂ ಕೂಡ ನಿಯಮ ೬೮ರ ಮೇರೆಗೆ ಈ ವಿಷಯವನ್ನು ಪ್ರಸ್ತಾಪಕ್ಕೆ ಇಡಿ ಎಂದು ಹೇಳಿದ್ದಾರೆ ಆದ್ದರಿಂದ ನಾಳೆಯದಿವಸ ಇದರ ಬಗ್ಗೆ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡುತ್ತೇನೆ. ಮಾನ್ಯ ವೀರಪ್ಪಮೊಯಿಲಿಯವರೇ ನಾನು ಇದನ್ನು Altogether reject ಮಾಡಿದ್ದರೆ ಈ ಪ್ರಶ್ನೆ ಬರುತ್ತಿತ್ತು. ಸ್ಪೆಸಿಫಿಕ್ ಆಗಿ ಈ ವಿಷಯದ ಬಗ್ಗೆ ನಿಯಮ ೬೮ರ ಪ್ರಕಾರ ಸಾಕಷ್ಟು ಚರ್ಚೆ ಮಾಡಲು ಅವಕಾಶವಿರಂತ್ತದೆ. ತಾವು ವಿಶಾಲವಾಗಿ ಹೇಳಬಹುದು. ಒಂದುವೇಳೆ ಅವಕಾಶವನ್ನು ಕೊಟ್ಟಿಲ್ಲದೆ ಇದ್ದರೆ ತಾವು ಹೇಳಬಹುದಿತ್ತು.

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಅಧ್ಯಕ್ಷರೇ ಇದು ದಲಿತರ ಮೇಲೆ ಅದಂಥ ದೌರ್ಜನ್ಯದ ವಿಚಾರ. ಆದ್ದರಿಂದ ಇದನ್ನು ಈಗಲೇ ಅಡ್ಜರ್ನ್‌ಮೆಂಟ್ ಮೋಷನ್ ಮೇಲೆ ತೆಗೆದು ಕೊಳ್ಳಿ. ಮಾನ್ಯ ಟಿಪ್ಪೆಸ್ವಾಮಿಯವರು ಬೆಂಡಿಗೇರಿ ಪ್ರಕರಣ ಮತ್ತು ಬೇರೆ ಬೇರೆ ಪ್ರಕರಣಗಳ ಮೇಲೆ ಕೊಟ್ಟಿರತಕ್ಕಂಥ ವಿಷಯವನ್ನು ನೋಡಿದರೆ ಒಂದು ನಿಮಿಷಕೂಡ ಸಾವಕಾಶಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಇದಕ್ಕೆ ಬಹಳ ಪ್ರಾಮುಖ್ಯತೆಯನ್ನು ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಂ. ವಲ್ಲೀಕಾರ್ಜುನ ಖಾರ್ಗೆ.—ಮಾನ್ಯ ಅಧ್ಯಕ್ಷರೇ ಬಹಳ ಮಹತ್ವದವಾದಂಥ ವಿಷಯ ನಮ್ಮ ಮುಂದಿದೆ. ಇದರ ಬಗ್ಗೆ ಸದನದ ಒಬ್ಬ ಮಾನ್ಯ ಸದಸ್ಯರು ರಿಪೋರ್ಟ್‌ನ್ನು ಕೂಡ ಕೊಟ್ಟಿದ್ದಾರೆ. ಇದು ಒಂದೇ ಅಲ್ಲ ಇಂಥ ವಿಷಯಗಳು ನೂರಾರು ಇವೆ. ಬೆಂಡಿಗೇರಿ ಪ್ರಕರಣ ಇಡೀ ಪ್ರಪಂಚದಲ್ಲಿ ಮಾನವ ಕುಲಕ್ಕೆ ಕಳಂಕ ತರತಕ್ಕಂಥ ವಿಷಯವಾಗಿರುತ್ತದೆ. ಈ ವಿಷಯದ ಬಗ್ಗೆ ಚರ್ಚೆ ಮಾಡಲೇಬೇಕು. ದಯವಿಟ್ಟು ನಾನು ತಮ್ಮಲ್ಲಿ ಕಳಕಳಿಯಿಂದ ಮನವಿಯನ್ನು ಮಾಡಿ ಕೊಳ್ಳುತ್ತೇನೆ ಇದನ್ನು ಪ್ರೆಸ್ಟಿಜ್ ಇಶ್ಯೂ ಆಗಿ ತೆಗೆದುಕೊಳ್ಳಬೇಡಿ. ಇಂಥ ಒಂದು ಪ್ರಕರಣ ಎಂದಿಗೂ ಕೂಡ ಆಗಿರಲಿಲ್ಲ. ಇದಕ್ಕೆ ಸರ್ಕಾರದ ಕುಮ್ಮಕ್ಕು ಕೂಡ ಇದೆ. ಇದರಲ್ಲಿ ಸರ್ಕಾರಿ ನೌಕರರೂ ಕೂಡ ಇನ್‌ವಾಲ್ವ್ ಆಗಿದ್ದಾರೆ.

ಅಧ್ಯಕ್ಷರು.—ಮಾನ್ಯ ಗೃಹಮಂತ್ರಿಗಳು ಹೇಳಿದ್ದಾರೆ. ಸರ್ಕಾರದವರು ಏನು ಹೇಳುತ್ತಾರೋ ದಯವಿಟ್ಟು ಕೇಳಿ.

† ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ ಈಗ ತಾವು ಹೇಳಿದಹಾಗೆ ಅಡ್ವರ್ನ್ಮೆಂಟ್ ಮೋಷನ್ ಮತ್ತೊಂದು ರೂಲ್ಸ್ ಬಹಳವಾಗಿ ಬಂದು ನಿಮ್ಮ ತಲೆಗೆ ಬಿಸಿಯಾಗಿರುವ ವಿಚಾರ ಏನೆಂದರೆ ಇದು ನಿಲುವಳಿಸೂಚನೆಗೆ ಬೇಕಾದಂಥ ಒಂದೇ ಒಂದು ಘಟನೆಯಾಗಿದ್ದರೆ ಈಗ ತೆಗೆದುಕೊಳ್ಳಬಹುದಾಗಿತ್ತು. ಈಗ ಡಜನ್‌ಗಟ್ಟಲೆ ಘಟನೆಗಳು ಆಗಿರುವುದರಿಂದ ಯಾವುದನ್ನು ಹಾಕಬೇಕು ಯಾವುದನ್ನು ಬಿಡಬೇಕು ಎನ್ನುವುದು ಇದೆ. You will merit consideration under rules only. ಈ ರೀತಿ ಪರಿಸ್ಥಿತಿ ವಿವಮೊಗ್ಗದ ಲಾಕಪ್‌ನಲ್ಲಿ ಆಗಿರತಕ್ಕಂಥದ್ದು ಇರುತ್ತದೆ. ಫೋಟೋ ಸಹ ಇದೆ ಇದನ್ನು ನೋಡಿ, ದಲಿತ ಪಂಗಡಕ್ಕೆ ಸೇರಿದಂಥ ವ್ಯಕ್ತಿ. ಇದರ ಬಗ್ಗೆಯೂ ರೂಲ್ಸ್ ಪ್ರಕಾರ ಚರ್ಚೆಯಾಗಬೇಕಾಗಿದ್ದರೂ ಪ್ರಿಯಾರಿಟಿ ಇದಕ್ಕೆ ಕೊಡಬೇಕೆಂದು ನಾವು ಕೊಟ್ಟಿದ್ದೇವೆ. ಈ ವಿಚಾರದ ಬಗ್ಗೆ ಚರ್ಚೆಯಾಗಬೇಕು. ಮಾನ್ಯ ಗೃಹಮಂತ್ರಿಗಳು ಒಬ್ಬರೇ ಇದ್ದರೆ ಸಾಧ್ಯವಿಲ್ಲ. ಮಾನ್ಯ ಪಶುಸಂಖ್ಯಾಮಂತ್ರಿಗಳೂ ಕೂಡ ಇದಕ್ಕೆ ಜವಾಬ್ದಾರರಿರುತ್ತಾರೆ. ಇಬ್ಬರೂ ಜವಾಬ್ದಾರರಿರುವುದರಿಂದ ಪರಿಸ್ಥಿತಿಯನ್ನು ಸುಧಾರಿಸಬೇಕೆನ್ನುವ ದೃಷ್ಟಿಯಿಂದ ಕ್ರಮ ಯಾವರೀತಿ ತೆಗೆದುಕೊಳ್ಳುತ್ತಾರೆನ್ನುವುದನ್ನು ನೋಡಬೇಕಾಗಿದೆ.

ಏಕೆಂದರೆ ಇದನ್ನು ಅನೇಕ ದಿವಸಗಳಿಂದ ಇವತ್ತು ನಾಳೆ ನಾಡಿದ್ದು ಸುಧಾರಿಸುತ್ತೇವೆಂದರೂ ಸುಧಾರಿಸಲಿಲ್ಲ. ಮಾನ್ಯ ರಾಜಯ್ಯನವರು ಹೀಗಾದರೆ ಹಾಗಾಗುತ್ತದೆ. ಒಂದೆರಡು ದಿವಸ ಒಂದು ವಾರ ಟೈಂ ಕೊಡಿ ಎಂದರು. ಕೊನೆಗೂ ಆಗಲಿಲ್ಲ. ಆಫ್ಟರಲ್ಲಿ ಅವರ ಖಾತೆ ಬದಲಾವಣೆ ಆಯಿತು. ಮಾನ್ಯ ಜೋಲಪ್ಪನವರು ಬಂದಮೇಲೂ ಇದೇ ಕಥೆ ಆಯಿತು. ನಾವು ನಿರೀಕ್ಷೆ ಮಾಡಿದ್ದು ಹುಸಿ ಆಗಿದೆ. ರಾಜ್ಯದಲ್ಲಿ ನೀರಾವರಿ ಮಾಡುತ್ತೇವೆ, ವಿದ್ಯುಚ್ಛಕ್ತಿ ಒದಗಿಸುತ್ತೇವೆಂದು ಹೇಳಿರುವುದೆಲ್ಲಾ ಜನರಿಗೆ ಅರ್ಥವಾಗಿದೆ. ಕೊನೆಗೆ ಮಾನಕ್ಕೆ ಪ್ರಾಣಕ್ಕೆ ಆದರೂ ರಕ್ಷಣೆ ದೊರೆಯುತ್ತದೆಂಬುದೂ ಅನುಮಾನವಾಗಿದೆ. ಕಟ್ಟಕಡೆಯಲ್ಲಿರತಕ್ಕ ಜನರಿಗೆ ಪೋಲೀಸ್ ಸ್ಟೇಷನ್‌ನಲ್ಲಿ ಪೂರಾ ಕೊಡುವುದಕ್ಕೆ ಹೋದಾಗ ಅವರನ್ನು ಅಲ್ಲಿ ಹೊಡೆದು ಸಾಯಿಸಿದರೆ ಇನ್ನು ಏನು ಉಳಿಯುತ್ತದೆ ? ಇಂಥ ಪರಿಸ್ಥಿತಿ ಇರುವಾಗ ದಯವಿಟ್ಟು ಲೋಕಾಭಿರಾಮವಾಗಿ ಪರಿಶೀಲಿಸಲಿಕ್ಕೆ ಹೋಗಬೇಡಿ ಜನರಿಗೆ ಸ್ಪಂದಿಸುವ ಸರ್ಕಾರ ಇದೆ. ಇಲ್ಲಿ ಜನರ ಭಾವನೆಗಳು ಚರ್ಚೆಯಾಗಲಿ. ಇಂದಿನ ಕಾರ್ಯಕ್ರಮಗಳನ್ನು ತೆಗೆದುಕೊಳ್ಳದಿದ್ದರೆ ಅಷ್ಟೇ ಹೋಯಿತು. ಆದ್ದರಿಂದ ಈ ಬಗ್ಗೆ ಇವೊತ್ತು ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಒತ್ತಾಯಿಸುತ್ತೇನೆ.

ಅಧ್ಯಕ್ಷರು.—ಮಾನ್ಯ ಕಾನಡೆಯವರೆ ದಯವಿಟ್ಟು ಕುಳಿತುಕೊಳ್ಳಿ. ನಾನು ಈ ಬಗ್ಗೆ ಆಗಲೇ ರೂಲಿಂಗ್ ಕೊಟ್ಟಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಅವರು ಹೇಳುವುದು ಹೇಳಲಿ. ಮಾನ್ಯ ಮಂತ್ರಿಗಳು ಆಮೇಲೆ ಹೇಳುತ್ತಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇನ್ನೂ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿಲ್ಲ. ಈಗ ತಾವು ನಿರ್ಣಯ ಕೊಟ್ಟಿದ್ದೀರಿ. ಇದು ಮಹತ್ವದ ವಿಚಾರ ನಿಜ. ದಲಿತರ ಮೇಲೆ ಆದ ಅಮಾನುಷ ಕೃತ್ಯದ ಬಗ್ಗೆ ಎಷ್ಟು ಖಂಡನೆ ಮಾಡಿದರೂ ಕಡಿಮೆಯೇ. ಅದರ ಬಗ್ಗೆ ಏನೂ ಭಿನ್ನಾಭಿಪ್ರಾಯವಿಲ್ಲ. ಚರ್ಚೆ ಆಗಬೇಕು, ಚರ್ಚೆ ಆಗಬಾರದೆಂದು ಅಲ್ಲ. ಕಳೆದ ಅಧಿವೇಶನದಲ್ಲಿ ಈ ವಿಷಯವನ್ನು ಮಾನ್ಯ ಖರ್ಗೆಯವರು ಎತ್ತಿದ್ದರು. ಡಾ॥ ತಿಪ್ಪೇಸ್ವಾಮಿಯವರು ಹೋಗಿ ವಿಚಾರಣೆ ಮಾಡಿ ರಿಪೋರ್ಟ್ ಕೊಟ್ಟಿದ್ದಾರೆ ಆ ಬಗ್ಗೆಯೂ ಚರ್ಚೆ ಆಗಬೇಕು.

ಶ್ರೀ ಧರ್ಮಸಿಂಗ್.—ಆ ಕಮಿಟಿಯವರು ನನ್ನ ಕ್ಷೇತ್ರಕ್ಕೆ ಬಂದು ಹೋಗಿರುವುದರಿಂದ ಆ ಬಗ್ಗೆ ನಾನೂ ಕೂಡ ಮಾತನಾಡಬೇಕಾಗಿದೆ.

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನೀರಾವರಿ ಬಗ್ಗೆ, ಆರ್ಥಿಕ ಪರಿಸ್ಥಿತಿಯ ಬಗ್ಗೆ ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಆ ಬಗ್ಗೆ ಏನಾದರೂ ಹೇಳುವುದಿದ್ದರೆ ಸಂದರ್ಭ ಬಂದಾಗ ಮಾನ್ಯ ಶ್ರೀನಿವಾಸ್‌ರವರು ಸಮರ್ಥರಿದ್ದಾರೆ, ಹೇಳಲಿ.

ಶ್ರೀ ಬಿ. ಬಸವಲಿಂಗಪ್ಪ.—ಅದು ಬೇರೆ ವಿಚಾರ. ಈಗ.. ...

ಅಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಿ, ಹೇಳುತ್ತೇನೆ. ಈ ಕಡೆಯವರು ಹೇಳುವುದನ್ನೆಲ್ಲಾ ಹೇಳಿದ್ದಾರೆ. ಈಗ ಅವರು ಏನು ಹೇಳುತ್ತಾರೆ ಕೇಳೋಣ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನೀರಾವರಿ ಮತ್ತು ವಿದ್ಯುಚ್ಛಕ್ತಿ ಬಗ್ಗೆ ಮಾತನಾಡಬೇಕೆಂದು ಹೇಳಲಿಲ್ಲ.. ...

ಅಧ್ಯಕ್ಷರು.—ಮಾನ್ಯ ಶ್ರೀನಿವಾಸ್‌ರವರೇ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕರ್ನಾಟಕದ ಜನರಿಗೆ ಗೊತ್ತಿದೆ. ಅಧಿಕಾರದಲ್ಲಿ.....

(ಗೊಂದಲ)

ಶ್ರೀ ಧರ್ಮಸಿಂಗ್.—ಈಗಾಗಲೇ ತಮ್ಮದೂ ಸಾಕಷ್ಟು ಜನರಿಗೆ ಗೊತ್ತಾಗಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಚುನಾವಣೆ ಬಂದಾಗ ಎಲ್ಲರಿಗೂ ಗೊತ್ತಾಗುತ್ತದೆ. ಅಲ್ಲಿಯವರೆಗೆ ನಾವು ನೀವು ಹೇಳುವುದರಲ್ಲಿ ಅರ್ಥವಿಲ್ಲ. ಲೋಕಸಭೆ ಚುನಾವಣೆಯೋ ಬರಲಿ, ವಿಧಾನಸಭೆಯ ಚುನಾವಣೆಯೋ ಬರಲಿ ಆಗ ಏನಾಗುತ್ತದೆಂಬುದು ಎಲ್ಲರಿಗೂ ಗೊತ್ತಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರ ಪೊಂಡು ಧೈರ್ಯಕ್ಕೆ ಒಪ್ಪುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಪೊಂಡು ಧೈರ್ಯ ಅಲ್ಲ. ಈಗ ಮಾನ್ಯ ಅಧ್ಯಕ್ಷರು ನಿರ್ಣಯ ಕೊಟ್ಟಿದ್ದಾರೆ. ಅವರು ನಿರ್ಣಯ ಕೊಟ್ಟಮೇಲೆ ಅದನ್ನು ಒಪ್ಪಬೇಕು. ನಾಳೆ ಚರ್ಚೆ ಮಾಡಲಿಕ್ಕೆ ನಾವು ಸಿದ್ಧರಿದ್ದೇವೆ.

ಅಧ್ಯಕ್ಷರು.—ಈಗಾಗಲೇ ನಾನು ರೂಲಿಂಗ್ ಕೊಟ್ಟಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ರೂಲ್ ೬೮ರ ಪ್ರಕಾರ ಈಗಲೇ ಚರ್ಚೆಗೆ ತೆಗೆದುಕೊಳ್ಳಿ.

ಅಧ್ಯಕ್ಷರು.—ನಾಳೆ ತೆಗೆದುಕೊಳ್ಳೋಣ ಎಂದು ಹೇಳಿದ್ದಾರೆ. ಗೃಹ ಮಂತ್ರಿಗಳು ಬರಲಿ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಮುಖ್ಯ ಮಂತ್ರಿಗಳೂ ಬರಬೇಕು.

(ಗೊಂದಲ)

ಅಧ್ಯಕ್ಷರು.—ಮಾನ್ಯ ಗೃಪ ಮಂತ್ರಿಗಳು ಬರಲಿ. ಸಾಧ್ಯವಾದರೆ ಇಪ್ಪತ್ತಾ ೩ ಗಂಟೆಗೇ ತೆಗೆದುಕೊಳ್ಳೋಣ. ಈಗ ಗಮನ ಸೆಳೆಯುವ ಸೂಚನೆ.

ಅಧ್ಯಕ್ಷರು.—ಈಗ ಗಮನ ಸೆಳೆಯುವ ಸೂಚನೆಗಳನ್ನು ತೆಗೆದುಕೊಳ್ಳೋಣ. ತಮ್ಮ ವಿಚಾರವನ್ನು ನಿಯಮ ೬೮ರ ಪ್ರಕಾರ ಚರ್ಚೆ ಮಾಡೋಣ ಎಂದು ನಾನು ಹೇಳಿದ್ದೇನೆ ಸರ್ಕಾರದವರೂ ಒಪ್ಪಿಕೊಂಡಿದ್ದಾರೆ. ಮಧ್ಯಾಹ್ನ ಮೂರು ಗಂಟೆಯ ಮೇಲೆ ಇದನ್ನು ಇಡೋಣ. ಮಾನ್ಯ ಗೃಹಮಂತ್ರಿಗಳೂ ಬರಲಿ. ಆವರೆಲ್ಲ ಎಂದರೆ ನಾಳೆ ಬೆಳಿಗ್ಗೆ ಇಡೋಣ. ಈಗ ನಾನು ತೀರ್ಮಾನ ಕೊಟ್ಟಿದ್ದೇನೆ. ಬೇರೆಯ ಮಾತಾಡುವುದು ಬೇಡ.

ಶ್ರೀ ಬಿ. ಬಸವಲಿಂಗಪ್ಪ.—ಅವರು ಈಗ ಬರಲಿ.

(ಗೊಂದಲ)

ಶ್ರೀ ಕೆ. ಬಿ. ಕೋಳೀವಾಡ್.—ನಾವು ಶಾಸಕರಾಗಿ ಕೇಳುತ್ತಿದ್ದೇವೆ.....

ಅಧ್ಯಕ್ಷರು.—ಇದು ಪದ್ಧತಿ ಅಲ್ಲ.

(ಗೊಂದಲ)

ಅಧ್ಯಕ್ಷರು —ಮಾನ್ಯ ಗೃಹ ಮಂತ್ರಿಗಳು ಬರಲಿ ಎಂದು ಹೇಳಿದ್ದೇನೆ.

(ಗೊಂದಲ)

ಶ್ರೀ ಪಂಪಾಪತಿ.—ಜನರ ಮಾನ ಪ್ರಾಣಕ್ಕಿಂತ ಬೇರೆ ವಿಚಾರ ಇಲ್ಲ. ಮಾನವನ ಪ್ರಾಣಕ್ಕಿಂತ ಬೇರೆ ಹೆಚ್ಚಿನದೇನಿಲ್ಲ.

MR. SPEAKEER.—Nothing wiil go on record. ಮಾನ್ಯ ಗೃಹಮಂತ್ರಿಗಳು ಬರಲಿ. ಸಾಧ್ಯವಾದರೆ ಮೂರು ಗಂಟೆಗೆ ಮಾಡೋಣ. ಸಾಧ್ಯವಾದರೆ ಇವತ್ತೇ ಮೂರು ಗಂಟೆಗೆ ಮಾಡೋಣ.

ಶ್ರೀ ಕೆ. ಎಚ್. ಪಾಟೀಲ್.—ಸಭಾಧ್ಯಕ್ಷರೆ, ತಾವು ನಿರ್ಣಯವನ್ನು.....

(ಗೊಂದಲ)

ಶ್ರೀ ಪಂಪಾಪತಿ.—ಜನರ ಮಾನ ಪ್ರಾಣಕ್ಕಿಂತ ಬೇರೆ ಏನಿದೆ ?

ಶ್ರೀ ಗೋಪಾಲ ಮುಕುಂದ ಕಾನಡೆ.—ಹರಿಜನರ ಮಾನ ಮರ್ಯಾದೆ ರಕ್ಷಣೆ ಮಾಡಿರಿ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಜಿಲ್ಲಾ ಪರಿಷತ್ ಸದಸ್ಯನಾಗಿದ್ದ ಲಕ್ಷ್ಮಣ ನಾಯ್ಕನ ಕೊಲೆಯ ಬಗ್ಗೆ ನಾನೂ ಸೂಚನೆ ಕಳುಹಿಸಿಕೊಟ್ಟಿದ್ದೇನೆ.

ಅಧ್ಯಕ್ಷರು —ಈಗಾಗಲೇ ನಾನು ರೂಲಿಂಗ್ ಕೊಟ್ಟಿದ್ದೇನೆ. ಮಾನ್ಯ ಗೃಹಮಂತ್ರಿಗಳು ಬರಲಿ. ನಂತರ ತೆಗೆದುಕೊಳ್ಳೋಣ.

ಶ್ರೀ ಪಂಪಾಪತಿ.—ಮಾನವ ಪ್ರಾಣಕ್ಕೆ ಮೊದಲು ಬೆಲೆ ಕೊಡಿ. ಅದಕ್ಕೆ ಅವಕಾ ಮಾಡಿಕೊಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಎಲ್ಲಾ ಕೆಲಸಗಳನ್ನೂ ಸ್ಥಗಿತಗೊಳಿಸಿ. ಜಿಲ್ಲಾ ಪರಿಷತ್ ಸದಸ್ಯನಾಗಿದ್ದ ಲಕ್ಷ್ಮಣ ನಾಯ್ಕನ ಕೊಲೆ ಪೋಲೀಸ್ ಸ್ಟೇಷನ್ ಎದುರುಗಡೆ ಹಾಡುಹಗಲಲ್ಲೇ ನಡೆದಿದೆ. ಇಂಥ ಅನೇಕ ವಿಚಾರಗಳಿವೆ. ಶಿವಮೊಗ್ಗದ್ದಿರಬಹುದು, ಬೇರೆ ಕಡೆಯದಿರಬಹುದು. ಇದರ ಬಗ್ಗೆ ಚರ್ಚೆ ನಡೆಯಲಿ.

ಅಧ್ಯಕ್ಷರು.—ಇದು ಪ್ರಮುಖವಾದ ವಿಷಯ ಎಂದೇ ನಿಯಮ ೬೮ರ ಪ್ರಕಾರ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೇನೆ. ಸರ್ಕಾರದವರೂ ಒಪ್ಪಿದ್ದಾರೆ.

ಶ್ರೀ ಕೆ. ಎಚ್. ಪಾಟೀಲ್.—ಸಾರ್ವಜನಿಕ ಹಿತದೃಷ್ಟಿಯಿಂದ ಇದು ಮಹತ್ವದ ವಿಚಾರ ಎಂಬುದು ಉಭಯತ್ರದ ಅಭಿಪ್ರಾಯವಾಗಿದೆ. ಇದರಲ್ಲಿ ಯಾವುದೇ ವ್ಯತ್ಯಾಸ ಇಲ್ಲ. ಇವತ್ತಿನ ದಿವಸ ಈ ವಿಷಯವನ್ನು ಅಡ್ಜರ್ನ್‌ಮೆಂಟ್ ಮೋಷನ್ ಆಗಿ ತೆಗೆದುಕೊಳ್ಳುವುದು ಬೇಡ, ಮತ್ತೆ ಬೇರೆ ರೀತಿಯಿಂದ ಚರ್ಚೆಗೆ ಅವಕಾಶ ಕೊಡೋಣ ಎಂದು ತಾವು ಹೇಳಿದ್ದೀರಿ. ಈ ಭಾಗದ ಪಂಖಿಂಡರೂ ಇದರ ಬಗ್ಗೆ ಹೇಳಿದ್ದಾರೆ. ಯಾವುದೇ ರೀತಿಯಿಂದಾಗಲೀ ಇವತ್ತೇ ಚರ್ಚೆಯಾಗಬೇಕು ಎಂದು ಹೇಳಿದ್ದಾರೆ. ಏತಕ್ಕೆ ಇದರ ಬಗ್ಗೆ ಹಠ ಎಂದರೆ ಮೊದಲನೆಯ ಸಲ ನಾವು ಇಲ್ಲಿ ಕೂಡುತ್ತಿದ್ದೇವೆ. ಇಂಥ ಹೀನಾಮಾನವಾದ ಘಟನೆ ಬಗ್ಗೆ ಸದನದ ಸಮಿತಿ ವಿಚಾರಣೆ ನಡೆಸಿ ಉಗ್ರವಾದ ವರದಿ ಕೊಟ್ಟ ಮೇಲೂ ಇದರ ಬಗ್ಗೆ ಚರ್ಚೆ ಮಾಡಲಿಲ್ಲ ಎಂದು ಜನರಲ್ಲಿ ತಪ್ಪು ಅಭಿಪ್ರಾಯ ಬರಬಾರದು ಎಂದು ಇವೊತ್ತೇ ಇದಕ್ಕೆ ಪ್ರಾಧಾನ್ಯತೆ ಕೊಡಬೇಕೆಂಬುದು ನಮ್ಮ ಅಭಿಪ್ರಾಯ. ಇದಕ್ಕೆ ಮಾನ್ಯ ಅಧ್ಯಕ್ಷರು ವಿವೇಚನೆಯಿಂದ ನಿರ್ಣಯ ತೆಗೆದುಕೊಂಡು ಗೃಹಮಂತ್ರಿಗಳನ್ನಾಗಲೀ ಮುಖ್ಯಮಂತ್ರಿಗಳನ್ನಾಗಲೀ ಇವತ್ತಿನದಿವಸ ಕರೆಯಿಸಿ ಮೂರುಗಂಟೆ ಹೊತ್ತಿಗೆ ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕು. ನಂತರ ಬೇರೆ ವಿಚಾರ ತೆಗೆದುಕೊಂಡರೆ ಎಲ್ಲರಿಗೂ ಸಮಾಧಾನವಾಗುತ್ತದೆ.

ಅಧ್ಯಕ್ಷರು.—ಅಡ್ಜರ್ನ್‌ಮೆಂಟ್ ಮೋಷನ್ ಕೊಟ್ಟ ತಕ್ಷಣ ಇದು ಮಹತ್ವದ ವಿಷಯ ಎಂದು ೬೮ರ ಪ್ರಕಾರ ಚರ್ಚೆಗೆ ಒಪ್ಪಿದ್ದೇನೆ.

ಶ್ರೀ ಕೆ. ಎಚ್. ಪಾಟೀಲ್.—ರೂಲಿಂಗ ಪ್ರಕಾರವೇ ಮೂರು ಗಂಟೆಗೆ ತೆಗೆದುಕೊಳ್ಳಿ. ಒಂದು ರೆಸಲ್ಯೂಷನ್ ಮಾಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಮೇಲೆ ಅವರು ಆಗುವುದಿಲ್ಲ ಎಂದರೆ ತೊಂದರೆ ಯಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ದಲಿತರ ರಕ್ಷಣೆ ಈ ಸರ್ಕಾರದ ಕೈಯಲ್ಲಿ ಆಗುವುದಿಲ್ಲ. ಈ ಸರ್ಕಾರದ ಕೈಯಲ್ಲಿ ಅವರು ಸುರಕ್ಷಿತವಾಗಿಲ್ಲ ಎಂದು ಮಾನ್ಯ ಮುಖ್ಯ ಮಂತ್ರಿಗಳನ್ನು, ಮಾನ್ಯ ಗೃಹಮಂತ್ರಿಗಳನ್ನು ಕರೆಯಿಸಬೇಕೆಂದು ಹೇಳುತ್ತಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ತಾವು ಈ ಸದನದಲ್ಲಿ ನಮಗೆ ರಕ್ಷಣೆ ಕೊಡಬೇಕು. ಇದನ್ನು ಆದ್ಯತೆಯ ಮೇಲೆ ಚರ್ಚೆಗೆ ತೆಗೆದುಕೊಳ್ಳಬೇಕು. ಇದನ್ನು ತಾವು ಬೆಳಿಗ್ಗೆಯಿಂದಲೇ ಹೇಳುತ್ತಿದ್ದೀರಿ. ೩ ಗಂಟೆಯ ಮೇಲಾದರೂ ಇದನ್ನು ಇವತ್ತೇ ಚರ್ಚೆಗೆ ತೆಗೆದುಕೊಳ್ಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೩ ಗಂಟೆಯ ಮೇಲಾದರೂ ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕು. ಅವರು ಆಗುವುದಿಲ್ಲವೆಂದಾದರೆ ಏನು ಮಾಡಬೇಕು? ಜನರು ಭಯಭೀತರಾಗಿದ್ದಾರೆ. ಲಕ್ಷ್ಮಣ–ನಾಯಕ್‌ರವರ ಕೊಲೆ ಪೋಲೀಸ್ ಠಾಣೆಯ ಎದುರುಗಡೆಯೇ ಆಗಿದೆ. ಆಕ್ಯೂಸ್ಡ್ ಇನ್ನೂ ಸಿಕ್ಕೇ ಇಲ್ಲ. ಅವನನ್ನು ಹಿಡಿಯುವುದಕ್ಕಾಗಿ ೫,೦೦೦ ರೂಪಾಯಿಗಳ ಬಹುಮಾನ ಕೂಡ ಘೋಷಣೆ ಮಾಡಿದ್ದಾರೆ.

ಅಧ್ಯಕ್ಷರು.— ನಾನು ಈಗಾಗಲೇ ನಾಳೆ ಎಂದು ಹೇಳಿಬಿಟ್ಟಿದ್ದೇನೆ. ಮಾನ್ಯ ಗೃಹ ಮಂತ್ರಿಗಳ ಜೊತೆ ಮಾತನಾಡುತ್ತೇನೆ. ಸಾಧ್ಯವಾದರೆ ಇವತ್ತೇ ಮೂರು ಗಂಟೆಯ ಮೇಲೆ ಚರ್ಚೆಗೆ ತೆಗೆದು ಕೊಳ್ಳೋಣ.

ಶ್ರೀ ಕೆ. ಹೆಚ್. ಪಾಟೀಲ್.— ತಮ್ಮ ಬಂದು ವಿವೇಚನೆಯಿಂದ ಇಷ್ಟೊತ್ತಿನವರೆಗೂ ಎಲ್ಲಾ ಸದಸ್ಯರನ್ನೂ ಸಮಾಧಾನದಲ್ಲಿಟ್ಟಿದ್ದೀರಿ. ಅದಕ್ಕಾಗಿ ತಾವು ಪ್ರಾಮಾಣಿಕ ಪ್ರಯತ್ನಕೂಡ ಮಾಡಿದ್ದೀರಿ. ವರದಿಯಲ್ಲಿನ ಒಂದು ವಾಕ್ಯವನ್ನು ಓದಿದರೆ ವಾಸ್ತವ ಸಂಗತಿ ಏನೆಂಬುದು ತಮಗೆ ಇನ್ನೂ ಮನವರಿಕೆ ಯಾಗುತ್ತದೆ.

ಅಧ್ಯಕ್ಷರು. — ವಿಷಯದ ಮಹತ್ವದ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಅದನ್ನು ಸರ್ಕಾರ ಕೂಡ ಒಪ್ಪಿದೆ. ಅದಕ್ಕಾಗಿಯೇ ಇನ್ನೂ ರೂಲ್ ೬೮ರ ಕೆಳಗೆ ತೆಗೆದುಕೊಳ್ಳಬೇಕೆಂದು ಕನ್ವರ್ಟ್ ಮಾಡಿ ದ್ದೇನೆ. ೩ ಗಂಟೆಯ ಮೇಲೆ ಚರ್ಚೆ ಮಾಡಬಹುದು. ಈ ಬಗ್ಗೆ ಮಾನ್ಯ ಗೃಹ ಮಂತ್ರಿಗಳ ಜೊತೆ ನಾನು ಮಾತನಾಡುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್ — ಅಧ್ಯಕ್ಷರೇ.....

ಅಧ್ಯಕ್ಷರು —ನಾನು ಏನು ಹೇಳುತ್ತಿದ್ದೇನೆಂಬುದನ್ನು ತಾವು ಸ್ವಲ್ಪ ಕೇಳಬೇಕು. ನಾನು ಇಂದು ಬೆಳಿಗ್ಗೆ ೧೦–೧೦ ಗಂಟೆಗೆ ಆಫೀಸಿಗೆ ಬಂದೆ. ಆಗಿಂದಲೇ ಮಾನ್ಯ ಗೃಹ ಮಂತ್ರಿಗಳಿಗೆ ಫೋನ್ ಹಚ್ಚಿ ಕೇಳಿದ್ದೇನೆ. ರೂಲ್ ೬೮ರ ಕೆಳಗೆ ವಿಷಯವನ್ನು ಚರ್ಚೆ ಮಾಡುವುದಕ್ಕೆ ಅವರೂ ಒಪ್ಪಿದ್ದಾರೆ. ಈಗ ಗಮನ ಸೆಳೆಯುವ ಸೂಚನೆಯ ಕಾರ್ಯಕಲಾಪ ನಡೆಯುತ್ತಿರಲಿ. ನಾನು ನನ್ನ ಕೊಠಡಿಗೆ ಹೋಗಿ ಮಾನ್ಯ ಗೃಹ ಮಂತ್ರಿಗಳ ಜೊತೆ ಮಾತನಾಡುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.— ೩ ಗಂಟೆಗೆ ಚರ್ಚೆ ಮಾಡುವುದಾದರೆ ಆಗಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅಮೇಲೆ ಅವರು ಆಗುವುದಿಲ್ಲವೆಂದಾದರೆ ಮತ್ತೆ ಮುಂದೆ ಹೋಗುತ್ತದೆ. ಇದು ಸಾರ್ವಜನಿಕ ಮಹತ್ವದ ವಿಷಯವಾಗಿದೆ.....

ಅಧ್ಯಕ್ಷರು.—ನಾನು ಬೆಳಿಗ್ಗೆ ಕಛೇರಿಗೆ ಬಂದ ಕೂಡಲೇ ನೋಡಿದಾಗ ಎರಡು ನಿಲುವಳಿ ಸೂಚನೆ ಬಂದಿದ್ದರೂ ಕೂಡ ವಿಷಯದ ಮಹತ್ವವಿರುವುದನ್ನು ಮನಗಂಡ ಮೇಲೆ ಕೂಡಲೇ ಮಂತ್ರಿಗಳ ಜೊತೆ ಮಾತನಾಡಿದ್ದೇನೆ ಅದಕ್ಕೆ ಅವರೂ ಕೂಡ ಒಪ್ಪಿದ್ದಾರೆ. ವಿಷಯವನ್ನು ಅವರ ಗಮನಕ್ಕೆ ತಂದು ಅಸೆಂಬ್ಲಿಯಲ್ಲಿ ಮಾನ್ಯ ಸದಸ್ಯರುಗಳು ಇದರ ಬಗ್ಗೆ ಚರ್ಚೆ ಮಾಡುತ್ತಾರೆ. ನೀವು ಹೇಳಿಕೆಯನ್ನು ಕೊಡಬೇಕಾಗುತ್ತದೆಂದು ಹೇಳಿದೆ. ಅದಕ್ಕೇ ಅವರು ನಾಳೆ ಎಂದು ಹೇಳಿದರು. ಈಗ ನಾನು ಪುನಃ

ಅವರ ಜೊತೆ ಮಾತನಾಡುತ್ತೇನೆ. ಇವತ್ತೇ ಸಾಧ್ಯವಾಗುವುದಾದರೆ ಮೂರು ಗಂಟೆಯ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೇನೆ. ವಿಷಯದ ಮಹತ್ವವನ್ನು ಸರ್ಕಾರ ಕೂಡ ಒಪ್ಪಿದೆ. ನೀವೂ ಒಪ್ಪಿದ್ದೀರಿ, ನಾನೂ ಒಪ್ಪಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ — ತಮಗೆ ವಿಷಯದ ಮಹತ್ವ ಮನವರಿಕೆಯಾಗಿದೆ. ವಿಷಯ ಬಹಳ ಭಯಂಕರವಾಗಿರತಕ್ಕದ್ದು. ಪ್ರಪಂಚದಲ್ಲಿ ಎಲ್ಲಿಯೂ ಆಗಿರದೇ ಇರತಕ್ಕಂಥದ್ದು ಇಲ್ಲಿ ಆಗಿದೆ. ಅದು ತಮಗೆ ಮನವರಿಕೆಯಾಗಿದೆ. ಈ ಮನೆಯು ಸಮಿತಿಯು ಸಂಬಂಧಪಟ್ಟ ಹಳ್ಳಿಗೆ ಭೇಟಿ ಮಾಡಿ ಅಲ್ಲಿನ ಹರಿಜನರಿಗೆ ಮಲ ತಿನ್ನಿಸಿರುವುದರ ಬಗ್ಗೆ ವರದಿಯನ್ನು ಕೊಟ್ಟಿದ್ದಾರೆ ವಿಷಯದ ಮಹತ್ವದ ಬಗ್ಗೆ ತಾವು ಹೇಳಿದ್ದೀರಿ. ಬೇರೆ ಜಾತಿಯವರಿಗೆ ತಿನ್ನಿಸಿದ್ದರೆ ಯಾವ ರೀತಿಯಲ್ಲಿ ಅವರ ಮನಸ್ಸಿಗೆ ಆಘಾತವಾಗುತ್ತಿತ್ತು ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ. ಇದನ್ನು ತಾವೇ ತೂಕ ಮಾಡಿ. ನಾವೆಲ್ಲಾ ಇಲ್ಲಿ ಶಾಸಕರಾಗಿದ್ದೇವೆ.

ಅಧ್ಯಕ್ಷರು.— ಇನ್ನು ಎಷ್ಟು ಸಾರಿ ಹೇಳಬೇಕು ? ನಾನು ಮಾನ್ಯ ಗೃಹಮಂತ್ರಿಗಳ ಜೊತೆ ಮಾತನಾಡಿ ವಿಚಾರ ಮಾಡುತ್ತೇನೆಂದು ಈಗಾಗಲೇ ಹೇಳಿದ್ದೇನೆ.

ಗಮನ ಸೆಳೆಯುವ ಸೂಚನೆ

ಚಾಮರಾಜನಗರ ಯಳಂದೂರು ಮತ್ತು ಕೊಳ್ಳೇಗಾಲದಲ್ಲಿ ಕಾಡಾನೆಗಳ ಹಾವಳಿ

ಶ್ರೀ ಜಿ. ರಾಜೂಗೌಡ (ಹಸೂರು). — ಚಾಮರಾಜನಗರ ಯಳಂದೂರು ಮತ್ತು ಕೊಳ್ಳೇಗಾಲ ತಾಲ್ಲೂಕುಗಳಲ್ಲಿ ಕಾಡಾನೆಗಳ ಹಾವಳಿಯಿಂದ ರೈತರ ಬೆಳೆಗಳಿಗೆ ಹಾನಿಯುಂಟಾಗಿದ್ದರಿಂದ ನಾನು ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜಿ. ಎಸ್. ಬಾಗಲಕೋಟೆ (ಅರಣ್ಯ ರಾಜ್ಯ ಸಚಿವರು).— ಮಾನ್ಯ ಅಧ್ಯಕ್ಷರೇ, ಇತ್ತೀಚೆಗೆ ಮೈಸೂರು ಜಿಲ್ಲೆಯ ಚಾಮರಾಜನಗರ, ಯಳಂದೂರು ಹಾಗೂ ಕೊಳ್ಳೆಗಾಲ ತಾಲ್ಲೂಕುಗಳಲ್ಲಿ ಕಾಡಾನೆಗಳ ಹಿಂಡಿನಿಂದ ರೈತರು ಬೆಳೆದ ಪದಾರ್ಥ ಬೆಳೆಗಳಿಗೂ, ವಾಣಿಜ್ಯ ಬೆಳೆಗಳಿಗೂ ಹಾಗೂ ಜಾನುವಾರುಗಳಿಗೂ ನಷ್ಟ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ವಿಷಯದಲ್ಲಿ ನೊಂದವರಿಗೆ ಪರಿಹಾರವನ್ನು ನೀಡಲಾಗಿದೆ. ವಿವರಗಳು ಈ ಕೆಳಕಂಡಂತಿವೆ

ತಾಲ್ಲೂಕಿನ ಹೆಸರು	ಆಹಾರ ಪದಾರ್ಥಗಳು		ವಾಣಿಜ್ಯ ಬೆಳೆಗಳು		ಜಾನುವಾರುಗಳು	
	ಪ್ರಕರಣಗಳು	ಪರಿಹಾರ ಧನ	ಪ್ರಕರಣಗಳು	ಪರಿಹಾರ ಧನ	ಪ್ರಕರಣಗಳು	ಪರಿಹಾರ ಧನ
೧	೨	೩	೪	೫	೬	೭
೧. ಚಾಮರಾಜನಗರ	೩೨	೬.೦೦ -೦೦	೨೧	೧೩,೦೦೦-೦೦	೧೫	೪,೦೨೦-೦೦
೨. ಯಳಂದೂರು	೬	೧.೬೦೨-೦೦	೪	೨,೦೦೦-೦೦	೩೪	೧೨,೦೦೦-೦೦
೩. ಕೊಳ್ಳೆಗಾಲ	೭೫	೫.೦೦೦-೦೦	೯	೪,೦೨೦-೦೦	—	—

ಕಾಡಾನೆಗಳ ಹಿಂಡಿನಿಂದ ಜಾನುವಾರು ಮತ್ತು ರೈತರ ಬೆಳೆಗಳಿಗೆ ಹಾನಿಯಾದಾಗ ಕೂಡಲೇ ಅವಶ್ಯಕ ಕ್ರಮ ಕೈಗೊಂಡು ನೊಂದವರಿಗೆ ಪರಿಹಾರಧನ ನೀಡಲು ಕ್ರಮಕೈಕೊಳ್ಳಲು ಸೂಚನೆ ನೀಡಲಾಗಿದೆ. ಇದಲ್ಲದೆ ಕಾಡಾನೆಗಳು ಪಾಸಗೀ ಜಮೀನುಗಳಿಗೆ ನುಗ್ಗದಂತೆ ಪ್ರತಿಬಂಧಕೋಪಾಯಗಳನ್ನು ಕೈಗೊಂಡು ಅವುಗಳ ಮೇಲೆ ನಿಗಾ ಇಟ್ಟು ಅವಶ್ಯವಿರುವಲ್ಲಿ ಓಡಿಸುವಲ್ಲಿ ಕ್ರಮ ಕೈಗೊಳ್ಳಲು ಆದೇಶ ನೀಡಲಾಗಿದೆ.